The elders of the village however advised the parties and accordingly the parties compromised. Even after this compromise, Veerappa G. Koliwadi (injured in Cr. No. 26/80) continued to instigate others against the accused and used to harass him. At present there is no such tension in the village. Local Police have maintained a vigilant watch over their activities to prevent further breach of the peace. The C.P.I. Shiggaon also visited the village on 23-3-1980 and the situation was well under control. The case in Cr. No. 27/80 has been charge sheeted against the accused under C C. No. 170/80. Case of Cr. No. 26/80 is P.I. with C.P.I. Shiggaon for want of injury certificates.

೧೮.೦೦ ಎ. ಎಂ.

ಶ್ರೀ ಎಂ. ಎಂ. ನಡಾಫ್.—ಮಾನ್ಯ ಅಧ್ಯಕ್ಷರೇ, ಶ್ರೀ ಸಿದ್ದನಗೌಡ ಪಾಟೀಲರಿಗೆ ಮರಣಾಂತಕ ಗಾಯಗಳಾಗಿದ್ದು ಮಿಕ್ಕವರಿಗೆ ಸಣ್ಣ ಪುಟ್ಟ ಗಾಯಗಳಾಗಿವೆ. ಈ ಪ್ರಕರಣದ ಬಗ್ಗೆ ಪೂರ್ವಯೋಜಿತ ಸಿದ್ದತೆ ಇದ್ದರೂ ಕೂಡ ಸಬ್-ಇನ್‌ಸ್ಪೆಕ್ಟರ್ ಅವರು ಸೆಕ್ಷನ್ ೩೦೭ರ ಪ್ರಕಾರ ಕ್ರಮ ತೆಗೆದುಕೊಂಡಿರುವುದಿಲ್ಲ. ಈ ಬಗ್ಗೆ ವಿಚಾರಣೆ ಮಾಡಬೇಕು. ಇನ್ನೊಂದು ವಿಚಾರವೇನೆಂದರೆ ಶ್ರೀ ಸಿದ್ದನಗೌಡ ಪಾಟೀಲರು ಕೊಟ್ಟಂಥ ಕಂಪ್ಲೇಂಟ್‌ನಲ್ಲಿ ಇದ್ದಂಥ ಪುಡಾರಿಗಳು ಯಾರು ಪ್ರತ್ಯಕ್ಷವಾಗಿ ಭಾಗವಹಿಸಿದ್ದರು ಅವರನ್ನು ಬಿಟ್ಟು ಬೇರೆಯವರ ಮೇಲೆ ಆರೋಪ ಮಾಡಿ ತನಿಖಾಧಿಕಾರಿಗಳು ಛಾರ್ಜ್‌ಷೀಟ್ ಸಲ್ಲಿಸಿದ್ದಾರೆ. ಈ ಬಗ್ಗೆ ಸಿ.ಬಿ.ಡಿ. ತನಿಖೆ ಮಾಡಿಸುತ್ತೀರಾ ? ಈಗಲೂ ಸಿದ್ದನಗೌಡರಿಗೆ ತೊಂದರೆ ಕೊಡುತ್ತಿದ್ದಾರೆ. ಮತ್ತು ಸಾಕ್ಷಿ ಪುರಾವೆಗಳನ್ನು ನಾಶಪಡಿಸುವುದಕ್ಕೆ ಪ್ರಯತ್ನಪಡುತ್ತಿದ್ದಾರೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಎತ್ತಿರುವ ವಿಷಯಕ್ಕೆ ಸ್ಟೇಟ್‌ಮೆಂಟ್ ಮಾಡಿದ್ದೇನೆ. ಈಗ ಇವರು ಹೊಸ ವಿಚಾರ ಹೇಳಿದ್ದಾರೆ, ಈ ಬಗ್ಗೆ ಯೋಚನೆ ಮಾಡಿ ಶಾಂತಿಪಾಲನೆಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

(*ii*) *re : Abnormal delay in establishing Canteen at Nippani Bus Stand.*

SRI G.K. TAKKED. (Parasgad)—Sir, I call the attention of the Minister for Transport and Minor Irrigation to the abnormal delay in establishing canteen at Nippani Bus stand.

SRI M. M. J. SADYOJATHA (Minister for Transport and Minor Irrigation) Sir, I wish to make the following statement :

The Nippani Bus Stand has a well established Resfreshment Room (Canteen) for the last so many years catering to the needs of the travelling public. No norms in regard to licence fee have been fixed in respect of Commercial Establishments. The refreshment rooms and other stalls in the various bus stations of KSRTC constructed to provide various amenities to the travelling public are licenced to interested parties on tender basis once in three years. The highest valid tenderer is preferred as a licensee taking into consideration his

financial stability, capacity to provide good service to the travelling public, reputation in the market etc., as per the existing Regulations.

2. For Nippani Bus Stand Refreshment Room, tenders were invited on 4-4-1979 to select a licensee to run the Refreshment Room at Nippani from 1-7-1979 as the term of the then Licensee was to expire on 30-6-1979. In response to the Notification issued by the KSRTC calling for tenders, the following persons had submitted their tenders.

		Rate quoted in the tender
1.	Shri K.A. Poojari ...	Rs. 4,667.89 ps per month
2.	Shri K.M. Shanbhag ...	4,551.00 ,, ,,
3.	Shri R.G. Shetty ...	4,051.00 ,, ,,
4.	Shri N.O. Shetty ...	2,915.55 ,, ,,

3. Though the offer of Shri. K.A. Poojari was the highest and his tender was valid in all respects, there was nothing on record to show that he had experience in running a catering establishment. Further, though Shri Shanbhag, the second tenderer and the existing licensee, came forward to match his tender to that of the highest tenderer, his tender was found invalid since he had failed to fulfil the terms and conditions of the tender in its entirity as on 26-4-1979 the day of opening of the tender. In the meanwhile, Shri. K.A. Poojari submitted a representation, requesting for allotment of canteen to him. The entire matter was placed before the KSRTC Board the matter was conside ed in their Meeting held on 13-2-1980 and the Corporation Board passed a Resolution that fresh tenders be invited for running the Refreshment Room at Nippani Bus Station with effect from 1-7-1980, and that till such time tenders are finalised the present contractor be permitted to run the refreshment room, in order to ensure that the travelling public are not inconvenienced. The said Resolution is reproduced below.

> "Resolution No. 4305.-Resolved that fresh tenders for running the Refreshment Room at Nippani Bus Stand Station with effect from 1st July 80 be invited and till such time tenders are finalised the present contractor be permitted to run the refreshment room".

Action is already on hand to invite tenders and select a licensee with effect from 1-7-1980.

ಶ್ರೀ ಜಿ. ಕೆ. ತಕ್ಕೇಡ್.—ಮಾನ್ಯ ಅಧ್ಯಕ್ಷರೇ, ನಿಪ್ಪಾಣಿ ಬಸ್‌ಸ್ಟ್ಯಾಂಡಿನ ಕ್ಯಾಂಟೀನ್ ಚೆನ್ನಾಗಿ ನಡೆಯುತ್ತಿದೆಯೆಂದೂ ಮಾನ್ಯ ಮಂತ್ರಿಗಳು ಹೇಳಿರುವುದು ಸತ್ಯಕ್ಕೆ ದೂರವಾದ ಮಾತು. ಆ ಕ್ಯಾಂಟೀನ್ ನೋಡಿದರೆ ಗೊತ್ತಾಗುತ್ತದೆ. ಅಲ್ಲಿನ ತಿಂಡಿತೀರ್ಥಗಳನ್ನು ಯಾವ ಪ್ರಾಣಿಯೂ ತಿನ್ನುವುದಕ್ಕಾಗುವುದಿಲ್ಲ. ಇಷ್ಟೊಂದು ಕೆಟ್ಟ ಪರಿಸ್ಥಿತಿಯಲ್ಲಿ ಆ ಕ್ಯಾಂಟೀನ್ ಇದೆ ಕೊಲ್ಲಾಪುರಕ್ಕೆ ೧೫ ಮೈಲಿ ಮುಂದೆ ಹೋಗಿ ನೋಡಿದರೆ ನಮ್ಮವರು ನಾಚಿಕೆಪಡಬೇಕು ಹಾಗೆ ಅವರು ನಡೆಸುತ್ತಿದ್ದಾರೆ. ಈ ನಿಪ್ಪಾಣಿ ಕ್ಯಾಂಟೀನ್.....

ಅಧ್ಯಕ್ಷರು.—ನಿಮಗೆ ಏನು ಸ್ಪಷ್ಟೀಕರಣ ಬೇಕೋ ಅದನ್ನು ಕೇಳಿ.

ಶ್ರೀ ಜಿ. ಕೆ. ತಕ್ಕೇಡ್.—ಮಾನ್ಯ ಮಂತ್ರಿಗಳು ನಿಪ್ಪಾಣಿ ಕ್ಯಾಂಟೀನ್ ಚೆನ್ನಾಗಿ ನಡೆಯುತ್ತಿದೆ ಎಂದು ಉತ್ತರ ಕೊಟ್ಟಿದ್ದಾರೆ. ಆದ್ದರಿಂದ ನಾನು ಈ ಪ್ರಶ್ನೆಗಳನ್ನು ಕೇಳಬೇಕಾಗಿದೆ.

ಅಧ್ಯಕ್ಷರು.—ನಿಮ್ಮ ಮನಸ್ಸಿನಲ್ಲಿ ಏನಿದೆ ಅದನ್ನು ಕೇಳಿ.

ಶ್ರೀ ಜಿ. ಕೆ. ತಕ್ಕೇಡ್.—ನಿಪ್ಪಾಣಿ ಬಸ್ ಸ್ಟ್ಯಾಂಡಿನಲ್ಲಿರುವ ಕ್ಯಾಂಟೀನನ್ನು ಸುಧಾರಿಸುವುದಕ್ಕೆ ಮಾನ್ಯ ಮಂತ್ರಿಗಳು ಕ್ರಮ ಕೈಗೊಳ್ಳುತ್ತಾರೆಯೇ? ಕ್ಯಾಂಟೀನ್ ನಡೆಸಲು ಟೆಂಡರ್ ಕರೆದಿದ್ದು ಅತೀ ಹೆಚ್ಚಿನ ಟೆಂಡರ್ ಶ್ರೀ ಕೆ. ಎ. ಪೂಜಾರಿಯವರದು. ಅವರು ೪,೬೬೭-೦೯ ಪೈಸೆ ಹಾಕಿದ್ದಾರೆ. ಕೆ. ಎಂ. ಶ್ಯಾನ್‌ಭೋಗ್ ಎಂಬುವರು ೪,೫೫೦-೦೦ ರೂಪಾಯಿ ಹಾಕಿದ್ದಾರೆ. ಇವರು ೫೦೦ ರೂಪಾಯಿ ಕೊಟ್ಟು ಕ್ಯಾಂಟೀನ್ ನಡೆಸುತ್ತಿದ್ದಾರೆ. ಇದರಿಂದ ಸರ್ಕಾರಕ್ಕೆ ಬರಬೇಕಾದಷ್ಟು ಲಕ್ಷಗಟ್ಟಲೆ ಹಣ ಕೆ.ಎಸ್.ಆರ್.ಟಿ.ಸಿ. ಯವರ ಅಲಕ್ಷ್ಯದಿಂದ ಹಾಳಾಗುತ್ತಿದೆ. ಕೆ.ಎಸ್.ಆರ್.ಟಿ.ಸಿ. ಯವರು ಕಣ್ಣುಮುಚ್ಚಿ ಗೊತ್ತುವಳಿ ಮಾಡಿದ್ದಾರೆ. "The present contractor be permitted to run the refreshment room. When tenders were opened the offer of Sri K. A. Poojari was the highest and his tender was valid in all respects. There was nothing on record to show that he had experience in running a catering establishment" ಎಂದು ಸ್ಟೇಟ್‌ಮೆಂಟಿನಲ್ಲಿ ಹೇಳಿದ್ದಾರೆ. ಬೆಳಗಾವಿಯಲ್ಲೂ ಅವರದೊಂದು ಹೋಟೆಲ್ ಇದೆ. ಹೋಟೆಲಿನಲ್ಲಿ ಹೆಚ್ಚಿನ ಅನುಭವ ಅವರಿಗಿದೆ. ಅವರು ಹೈಯೆಸ್ಟ್ ಟೆಂಡರ್ ದಾರರಾಗಿದ್ದರೂ ಉದ್ದೇಶಪೂರ್ವಕವಾಗಿ ಅವರಿಗೆ ಈ ಹೋಟೆಲನ್ನು ಕೊಟ್ಟಿಲ್ಲವೆಂದು ಹೇಳುತ್ತೇನೆ. ಇದಕ್ಕೆ ಹಿಂದೆ ಶ್ಯಾನಭಾಗ ಹೋಟೆಲಿನವರು ಎಷ್ಟು ಕೊಡುತ್ತಿದ್ದರು? ಅಲ್ಲದೆ, ದಿನಾಂಕ ೪-೪-೧೯೬೯ ರಲ್ಲಿ ಟೆಂಡರ್ ಕರೆದಿದ್ದಾರೆ ಮತ್ತು ದಿನಾಂಕ ೩೦-೬-೧೯೬೯ ರಂದು ಟೆಂಡರನ್ನು ಓಪನ್ ಮಾಡಿದ್ದಾರೆ. ಅಂದರೆ, ಅಲ್ಲಿಂದ ಇಲ್ಲಿಯವರೆಗೆ ಸುಮಾರು ಆರವತ್ತು ಸಾವಿರ ರೂಪಾಯಿಗಳಷ್ಟು ಹಣ ಸರ್ಕಾರಕ್ಕೆ ನಷ್ಟವಾಗಿದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ವಿವರಣೆಯನ್ನು ಪ್ರಶ್ನೆ ರೂಪದಲ್ಲಿ ಕೇಳಬೇಕು.

ಶ್ರೀ ಜಿ. ಕೆ. ತಕ್ಕೇಡ್.—ಈರೀತಿ ನಷ್ಟವಾಗಿರುವ ಹಣವನ್ನು ಅವರಕಡೆಯಿಂದ ತುಂಬಿಸಿ ಕೊಳ್ಳಲಿಕ್ಕೆ ಕ್ರಮ ತೆಗೆದುಕೊಳ್ಳಲಾಗಿದೆಯೇ? ಮತ್ತು ಶ್ರೀ ಪೂಜಾರಿ ಅವರಿಗೆ ಏತಕ್ಕೆ ಹೋಟಲನ್ನು ಕೊಡಲಿಲ್ಲ?

SRI M. M. J. SADYOJATHA.—I will get the matter thoroughly examined.

ಶ್ರೀ ಜಿ. ಕೆ. ತಕ್ಕೇಡ್.—ಅವರಿಂದ ಹಣ ಕಟ್ಟಿಸಿಕೊಳ್ಳಲಾಗುವುದೆ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಅದು ನನಗೆ ಗೊತ್ತಿಲ್ಲ. ವಿಚಾರ ಮಾಡುತ್ತೇನೆ.